2240075/2021/O/o DS(RTI)

ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರಕಾಶ್ ಕೆ ರಾಥೋಡ್ ರವರು ನಿಯಮ 72ರ ಮೇರೆಗೆ ಮಂಡಿಸಿರುವ ಸೂಚನೆಗೆ ಸರ್ಕಾರದ ಹೇಳಿಕೆ

ವಿಷಯ:

ಆಲಮಟ್ಟಿ ಜಲಾಶಯ ಹಿನ್ನೀರಿನಿಂದ ಸಂಪೂರ್ಣವಾಗಿ ಹೊಲ ಹಾಗೂ ಮನೆಗಳನ್ನು ಕಳೆದುಕೊಂಡ ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳ ಯೋಜನಾ ನಿರಾಶ್ರಿತ ಕುಟುಂಬಗಳ ವಿದ್ಯಾವಂತ ನಿರುದ್ಯೋಗಿ ಯುವಕರು ಸರ್ಕಾರದ ಸಿ ಮತ್ತು ಡಿ ಹುದ್ದೆಗಳಿಗೆ ಕಲ್ಪಿಸಲಾದ ಯೋಜನಾ ನಿರಾಶ್ರಿತ ಮೀಸಲಾತಿ ಸೌಲಭ್ಯದಿಂದ ಕಳೆದ ಏಳೆಂಟು ವರ್ಷಗಳಿಂದ ವಂಚಿತರಾಗಲಿದ್ದಾರೆ. ಏಕೆಂದರೆ ಅವಳಿ ಜಿಲ್ಲೆಯ ಗ್ರಾಮಗಳನ್ನು ಹಾಗೂ ಮುಳುಗಡೆಯಾಗುವ ಜಮೀನುಗಳ ಭೂಸ್ವಾಧೀನವನ್ನು 1980ರಿಂದ 1998ರವರೆಗೆ ಸ್ವಾಧೀನಪಡಿಸಿಕೊಂಡಿದ್ದು, 2000ನೇ ಇಸವಿಯಲ್ಲಿ ಜಾರಿಗೆ ಬಂದ ಈ ಮೀಸಲಾತಿ ಸೌಲಭ್ಯ ಕೇವಲ ಇಪ್ಪತ್ತು ವರ್ಷಗಳವರೆಗೆ ಮಾತ್ರ ಇರುತ್ತದೆ ಎಂಬ ನಿರ್ಬಂಧ ಹೇರಲಾಗಿದ್ದು, ಈ ನಿರ್ಬಂಧವನ್ನು ತೆಗೆದು ಹಾಕಿ, ಯಾರು ಹೊಲ ಮತ್ತು ಮನೆಗಳನ್ನು ಸಂಪೂರ್ಣವಾಗಿ ಕಳೆದುಕೊಂಡು ನಿರಾಶ್ರಿತರಾಗಿದ್ದಾರೊ ಅಂತಹ ವಿದ್ಯಾವಂತ ಯುವಕರಿಗೆ ಸರ್ಕಾರಿ ನೇಮಕಾತಿಯಲ್ಲಿ ಪ್ರಥಮ ಆದ್ಯತೆ ನೀಡಿ, ಈ ಮೀಸಲಾತಿ ಸೌಲಭ್ಯವನ್ನು 2025ರವರೆಗೆ ವಿಸ್ತರಿಸುವ ಬಗ್ಗೆ"

ಉತ್ತರ:

ದಿನಾಂಕ: 23.11.2000ದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 23 ಎಸ್‌ಆರ್‌ಆರ್ 99ರನ್ವಯ ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 9ರನ್ವಯ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 20 ವರ್ಷಗಳ ಅವಧಿಯವರೆಗೆ ಯೋಜನಾ ನಿರಾಶ್ರಿತ ಕುಟುಂಬದ ಸದಸ್ಯರಿಗೆ ರಾಜ್ಯ ನಾಗರಿಕ ಸೇವೆಗಳಲ್ಲಿ ಗುಂಪು-ಸಿ ಮತ್ತು ಗುಂಪು-ಡಿ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಶೇಕಡ 5ರಷ್ಟು ಸಮತಳ ಮೀಸಲಾತಿಯನ್ನು ಕಲ್ಪಿಸಲಾಗಿರುತ್ತದೆ.

ಮೇಲ್ಕಂಡ ಅಧಿಸೂಚನೆಯು ದಿನಾಂಕ: 23.11.2000ರಂದು ಜಾರಿಗೆ ಬಂದಿದ್ದು, ಆ ದಿನಾಂಕದಿಂದ 20 ವರ್ಷಗಳವರೆಗೆ ಅಂದರೆ ದಿನಾಂಕ: 23.11.2020ರ ಅವಧಿಯವರೆಗೆ ಈ ಸಮತಳ ಮೀಸಲಾತಿಯು ಜಾರಿಯಲ್ಲಿತ್ತು.

ಯೋಜನಾ ನಿರಾಶ್ರಿತರಿಗೆ ಕಲ್ಪಿಸಿರುವ ಸಮತಳ ಮೀಸಲಾತಿ ಸೌಲಭ್ಯವನ್ನು 2025ನೇ ಸಾಲಿನವರೆಗೆ ಮುಂದುವರೆಸುವ ಕುರಿತು ಆರ್ಥಿಕ ಇಲಾಖೆ ಹಾಗೂ ಕಾನೂನು ಇಲಾಖೆಗಳೊಂದಿಗೆ ಸಮಾಲೋಚಿಸಿ ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 9ಕ್ಕೆ ತಿದ್ದುಪಡಿ ಮಾಡುವ ಪ್ರಸ್ತಾವನೆಯು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಪರಿಶೀಲನೆಯಲ್ಲಿದೆ.

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)

ಮುಖ್ಯ ಮಂತ್ರಿ.

ಸಂಖ್ಯೆ: ಸಿಆಸುಇ 19 ಎಸ್‌ಆರ್‌ಆರ್ 2021